## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 227 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ' ಸೋಜಾ(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 10.12.2018. |
| ಉತ್ತರಿಸುವ ಸಚಿವರು | : | ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ] | ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪಶುಸಂಗೋಪನೆ ಕಾಲೇಜನ್ನು ಪ್ರಾರಂಭಿಸಲು ಕಾಲವಕಾಶವನ್ನು ನಿಗದಿಸಲಾಗಿದೆಯೇ: ಕಾಲೇಜು ಪ್ರಾರಂಭಗೊಳ್ಳುವುದು ಯಾವಾಗ: ಕಾಮಗಾರಿ ವಿಳಂಬಗೊಳ್ಳಲು ಕಾರಣಗಳೇನು;(ವಿವರ ನೀಡುವುದು) | 2011-12 ನೇ ಸಾಲಿನಿಂದ ಕಟ್ಟಡ ಕಾಮಗಾರಿಗಳು ನಡೆದಿರುತ್ತದೆ. ಸದರಿ ಮಹಾವಿದ್ಯಾಲಯದ ಕಾಮಗಾರಿಯು ಡಿಸೆಂಬರ್ 2020ರ ಅಂತ್ಯದ ವೇಳೆಗೆ ಪೂರ್ಣಗೊಳ್ಳುವುದು.<br>ಈ ಕಾಮಗಾರಿಗಳಿಗೆ ಸರ್ಕಾರದಿಂದ ಮಂಜೂರಾದ ಒಟ್ಟು ಮೊತ್ತ ರೂ. 110.00 ಕೋಟಿಗಳು. ಅದರಲ್ಲಿ, ಇಲ್ಲಿಯವರೆಗೆ ಬಿಡುಗಡೆಯಾದ ಮೊತ್ತ ರೂ. 35.50 ಕೋಟಿಗಳು. ಸದರಿ ಮಹಾವಿದ್ಯಾಲಯದ ಕಾಮಗಾರಿಗಳ ಕೆಲಸ ನಿರ್ವಹಿಸಲು ಉಳಿದ ಮೊತ್ತವನ್ನು ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| ಆ] | ಪ್ರಸ್ತುತ 2018-19 ನೇ ಸಾಲಿನಲ್ಲಿ ವಿದ್ಯಾರ್ಥಿಗಳನ್ನು ಸೇರ್ಪಡೆಗೊಳಿಸಲು ಕ್ರಮಕೈಗೊಳ್ಳಲಾಗಿದೆಯೇ(ವಿವರ ನೀಡುವುದು) | ಸದರಿ ಮಹಾವಿದ್ಯಾಲಯದ ಕಟ್ಟಡ ಹಾಗೂ ಇನ್ನಿತರೆ ಕಾಮಗಾರಿಗಳು ಪೂರ್ಣಗೊಳ್ಳದೆ ಇರುವುದರಿಂದ 2018-19ನೇ ಸಾಲಿನಲ್ಲಿ ಶೈಕ್ಷಣಿಕ ಚಟುವಟಿಕೆ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. 2020-21ನೇ ಸಾಲಿನ ಶೈಕ್ಷಣಿಕ ವರ್ಷದಿಂದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ, ಶೈಕ್ಷಣಿಕ ಚಟುವಟಿಕೆ ಆರಂಭಿಸಲಾಗುವುದು. |
| ಇ] | ರಾಜ್ಯದಲ್ಲಿ ಪಶುವೈದ್ಯರುಗಳ ಸಂಖ್ಯೆ ಕಡಿಮೆ ಇರುವುದು ನಿಜವೇ: ರಾಜ್ಯದಲ್ಲಿ ಖಾಲಿ ಇರುವ ಪಶುವೈದ್ಯರುಗಳ ಸಂಖ್ಯೆ ಎಷ್ಟು: ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ರಾಜ್ಯದಲ್ಲಿ ವರ್ಷವೊಂದಕ್ಕೆ ಎಷ್ಟು ಪಶುವೈದ್ಯರುಗಳಿಗೆ ತರಬೇತಿ ನೀಡಲಾಗುವುದು? (ವಿವರ ನೀಡುವುದು) | ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಪ್ರಸ್ತುತ ಸಹಾಯಕ ನಿರ್ದೇಶಕರು / ಮುಖ್ಯ ಪಶುವೈದ್ಯಾಧಿಕಾರಿಗಳು / ಹಿರಿಯ ಪಶುವೈದ್ಯಾಧಿಕಾರಿಗಳ ಒಟ್ಟು 275 ಹಾಗೂ ಪಶುವೈದ್ಯಾಧಿಕಾರಿಗಳ 466 ಹುದ್ದೆಗಳು ಖಾಲಿ ಇರುತ್ತವೆ. ಈ ಬಗ್ಗೆ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ.<br>**ಸಹಾಯಕ ನಿರ್ದೇಶಕರು:-**ಪಶುವೈದ್ಯಾಧಿಕಾರಿಗಳ ಹುದ್ದೆಯಿಂದ ಮುಂಬಡ್ತಿ ನೀಡಬೇಕಾಗಿದ್ದು, ಕಾಲಮಿತಿ ಮುಂಬಡ್ತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುವುದು.<br>**ಪಶುವೈದ್ಯಾಧಿಕಾರಿ:-**ವಿಶೇಷ ನೇಮಕಾತಿ ನಿಯಮ 2017 ರಡಿಯಲ್ಲಿ ಒಟ್ಟು 476 ಹುದ್ದೆಗಳನ್ನು |

| | | |
|---|---|---|
| | | ತುಂಬಲಾಗಿದ್ದು, ಹೈದರಾಬಾದ್ ಕರ್ನಾಟಕ ಮೀಸಲು ಹುದ್ದೆಯಲ್ಲಿ ಆಯ್ಕೆಯಾದ 75 ಅಭ್ಯರ್ಥಿಗಳಲ್ಲಿ ಸಿಂಧುತ್ವ ಬಂದಿರುವ 46 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ. ಪ್ರಸ್ತುತ ಖಾಲಿ ಇರುವ 466 ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಕ್ರಮವಹಿಸಲಾಗುವುದು. |

**ಸಂ: ಪಸಂಮೀ 275 ಪಅಸೇ 2018**

**(ವೆಂಕಟರಾವ್ ನಾಡಗೌಡ)**
**ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು**